# ಜೀವನ ಯಜ್ಞ

ಯಜ್ಞ ಎನ್ನುವ ಪರಿಕಲ್ಪನೆ ಬಲು ಪ್ರಾಚೀನವಾದುದು. ಯಜ್ಞವೆಂದರೆ ಅಗ್ನಿಯಲ್ಲಿ ದ್ರವ್ಯಗಳನ್ನು ಹೋಮಿಸುವುದೆಂದೇ ಬಹಳ ಜನ ತಿಳಿದಿದ್ದಾರೆ. ಅದು ಕೇವಲ ಆಂಶಿಕ ಸತ್ಯಮಾತ್ರ. ಶ್ರದ್ಧಾಪೂರ್ವಕವಾಗಿ ಮಾಡುವ ಪ್ರತಿಯೊಂದು ಕಾರ್ಯವೂ ಯಜ್ಞವೇ. ಇದು 'ಯಜ' ಧಾತುವಿನಿಂದಾದ ಪದ. 'ಯಜ' ಎಂಬುದಕ್ಕೆ ಪೂಜಿಸು, ಸಮರ್ಪಿಸು, ಹೋಮಿಸು, ದಾನಮಾಡು ಎಂಬ ಅರ್ಥಗಳಿವೆ. ಗೀತೆಯಲ್ಲಿ ಹಲವು 'ಯಜ್ಞ'ಗಳನ್ನು ಪ್ರಸ್ತಾಪಿಸಲಾಗಿದೆ. ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಅಧ್ಯಯನಯಜ್ಞ ಇವುಗಳ ಜತೆ ಕೃಷಿಯಜ್ಞ, ವನಯಜ್ಞ ಇವುಗಳನ್ನು ಸೇರಿಸಿಕೊಳ್ಳಬಹುದು. ನಾವು ಸೇವಿಸುವ ಆಹಾರ ಕೂಡ ಯಜ್ಞವೆ ಆಗಿದೆ. ಒಬ್ಬ ಕೃಷಿಕ ತನ್ನ ತೋಟಕ್ಕೆ ನೀರು ಬಿಡುವುದು, ಗೊಬ್ಬರ ಹಾಕುವುದೂ ಯಜ್ಞ. ನಮ್ಮದು ಕೃಷಿ ಪ್ರಧಾನವಾದ ದೇಶವಷ್ಟೆ. ಹಿಂದಿನ ಕಾಲದಲ್ಲಿ ತೆಂಗಿನ ತೋಟಗಳಿಗೆ ನೀರು ಬಿಡುವಾಗ, ಬೇಸಿಗೆಯಲ್ಲಿ ಗಿಡಗಳಿಗೆ ನೀರನ್ನು ಸಿಂಪಡಿಸುವಾಗ ರುದ್ರಚಮಕಗಳನ್ನು ಹೇಳುತ್ತಿದ್ದರು. ಸಸ್ಯಗಳು ಶಿವನ ರೂಪಗಳೆಂದು ಪೂರ್ವಿಕರು ಭಾವಿಸಿದ್ದರು. 'ಯೋ ರುದ್ರೊ ಅಗ್ನೆ, ಅಪ್ಸು, ಯ ಓಷಧೀಷು, ಯೋ ರುದ್ರೋ ವಿಶ್ವಭುವನಾವಿವೇಶ, ತಸ್ಮೈ ರುದ್ರಾಯ ನಮೋ ಅಸ್ತು' ಹೀಗೆಂದು ಹೇಳುತ್ತಿದ್ದರು. ರುದ್ರನೇ ನೀನೇ ಅಗ್ನಿ, ನೀರು, ಗಾಳಿ, ಭೂಮಿ. ನೀನು ಎಲ್ಲೆಡೆ ಇದ್ದೀಯೆ! ಎಂದು ಇದರ ಅರ್ಥ! ಇದು 'ವಿಶ್ವಯಜ್ಞ'ದ ವಿಶಾಲವಾದ ಅರ್ಥ. ಆದರೆ, ನಾವು ಇದನ್ನು ಮರೆತು ಕುಳಿತಿದ್ದೇವೆ ಅಷ್ಟೆ!

ನಮ್ಮ ಕಣ್ಣುಗಳಿಗೆ ಕಾಣುವ ಸಮಗ್ರ ಪ್ರಕೃತಿ ಮತ್ತು ಅದರಲ್ಲಿರುವ ವಿಷಯವಿಶೇಷಗಳು ವಿಶ್ವಚೈತನ್ಯದ ವಿಭೂತಿಗಳೇ ಆಗಿವೆ. ಇದು ಒಂದು ರೀತಿಯಲ್ಲಿ 'ವಿಭೂತಿಪೂಜೆ'ಯೇ ಸರಿ. ಕುವೆಂಪು ತಮ್ಮ ಪುಸ್ತಕವೊಂದಕ್ಕೆ 'ವಿಭೂತಿಪೂಜೆ' ಎಂದು ಹೆಸರಿಟ್ಟಿದ್ದಾರೆ. ಅವರ ಅರ್ಥವು ಆರ್ಷನುಡಿಗೆ ಸಂವಾದಿಯಾಗಿದೆ. ನಾವು ಯಾವುದೇ ಬಗೆಯ ವಿಭೂತಿಪೂಜೆ ಮಾಡಬೇಕಾದರೆ, ನಮ್ಮಲ್ಲಿ ನಮ್ರತೆ ಬೇಕು, ತ್ಯಾಗಬೇಕು. ಹೀಗಾಗಿ, ಉಪನಿಷತ್ತು ಒಂದೆಡೆ 'ತ್ಯಾಗೇನೈಕೇ ಅಮೃತತ್ವ ಮಾನುಷಃ' ತ್ಯಾಗದಿಂದ ಮಾತ್ರ ಮೋಕ್ಷ ಸಾಧ್ಯ ಎಂದು ಹೇಳುತ್ತದೆ. ನಮ್ಮ ಎಲ್ಲಾ ಬಗೆಯ ಪೂಜೆಗಳು 'ಧರ್ಮ'ದ ಅಡಿಮಣೆಯ ಮೇಲೆ ವಿಕಸಿತವಾಗಬೇಕು. ಒಬ್ಬ ನೌಕರ ಪ್ರಾಮಾಣಿಕತೆಯಿಂದ ಕರ್ತವ್ಯವನ್ನು ನಿರ್ವಹಿಸಿದರೆ ಅದೂ ಕೂಡ ಯಜ್ಞವೇ. ನಾವು ಮಾಡುವ ಪ್ರತಿಯೊಂದು ಕಾರ್ಯದ ಹಿಂದೆಯೂ ಧರ್ಮವು ಗುಪ್ತವಾಗಿ ಅಡಗಿರುತ್ತದೆ. 'ಧರ್ಮೇಣ ಹೀನಾಃ ಪಶುಭಿಃ ಸಮಾನಾಃ' ಧರ್ಮಹೀನರು ಪಶುಗಳಿಗೆ ಸಮಾನರೆಂದು ಆರ್ಷನುಡಿಯು ನಮ್ಮನ್ನು ಎಚ್ಚರಿಸುತ್ತದೆ. 'ನೀನೂ ಬದುಕು ಮತ್ತು ಇನ್ನೊಬ್ಬರನ್ನು ಬದುಕಲು ಬಿಡು' ಇದು ಮಾನವಧರ್ಮ, ಇದು ವೈಶ್ವಕತತ್ವದ ಯಜ್ಞತತ್ವ. ನಾವು ಶರೀರಧರ್ಮವನ್ನು ಗಮನಿಸುತ್ತಿರಬೇಕು. ನಮ್ಮ ಶರೀರ ಒಂದು ನಗರವಿದ್ದಂತೆ. ಇಲ್ಲಿ ನೀರಿನ (ರಕ್ತದ) ಕೊಳವೆಗಳಿವೆ. ಈ ಕೊಳವೆಗಳೇ ನರಗಳು. ಶುದ್ಧ– ಅಶುದ್ಧ ವಸ್ತುಗಳ ಸಂಚಾರಕ್ಕೆ ಬೇರೆಬೇರೆ ಕೊಳವೆಗಳುಂಟು. ನಮ್ಮ ಶರೀರವೆಂಬ ಪಟ್ಟಣಕ್ಕೆ ಒಂಬತ್ತು ಬಾಗಿಲುಗಳಿವೆ. ಅವು ಕಣ್ಣುಗಳೆರಡು, ಮೂಗಿನ ಹೊಳ್ಳೆಗಳೆರಡು, ಕಿವಿಗಳೆರಡು, ಬಾಯಿ, ಮಲದ್ವಾರ, ಮೂತ್ರದ್ವಾರ. ಇನ್ನು ಎಂಟು ಪಟ್ಟಣದ ಕೋಟೆಗಳುಂಟು. ಅವು: ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ, ಸಹಸ್ರಾರ ಮತ್ತು ಸುರತಿಕಮಲ. ಈ ಎಂಟು ಚಕ್ರಗಳೇ ಎಂಟು ಕೋಟೆಗಳಾಗಿವೆ. ಇಷ್ಟು ಮಾತ್ರವಲ್ಲ, ನಮ್ಮ ಮಸ್ತಕದಲ್ಲಿ ಅಯೋಧ್ಯೆಯೂ ಉಂಟು. ಅಲ್ಲಿ ಆಕಾಶವಿದ್ದು ನಕ್ಷತ್ರಗಳಿಂದ ಅದು ಜ್ಯೋತಿರ್ಮಯವಾಗಿದೆ. ಯಜುರಾರಣ್ಯಕದ ಈ ಮಾತನ್ನು ಗಮನಿಸಿ.

ಅಷ್ಟಾ ಚಕ್ರಾ ನವದ್ವಾರಾ ದೇವಾನಾಂ ಪೂರಯೋಧ್ಯಾ! ತಸ್ಯಾಂ ಹಿರಣ್ಮಯಃ ಕೋಶಃ ಸ್ವರ್ಗೋ ಲೋಕೋ ಜ್ಯೋತಿಷಾವೃತಃ ! ನಮ್ಮ ದೇಹದಲ್ಲಿ ದಿನದಿನವೂ ನಡೆಯುತ್ತಿರುವ ಶರೀರಯಜ್ಞವಿದು. ಈ ಯಜ್ಞತತ್ವವನ್ನು ತಿಳಿದು ನಡೆದರೆ ಅವನು ಅಮೃತಮಯನೇ ಆಗುತ್ತಾನೆ. ಅವನು ಆಯುರಾರೋಗ್ಯದಿಂದ ಕ್ಷೇಮಂಕರನಾಗುತ್ತಾನೆ!

ಯಜ್ಞಕ್ಕೆ ಮೂರು ಆಯಾಮಗಳುಂಟು. ಆ ಮೂರನ್ನು ಉಪಾಸನೆ ಮಾಡಬೇಕು. ದೇವೋಪಾಸನೆ, ಜೀವನೋಪಾಸನೆ ಮತ್ತು ವ್ಯಕ್ತಿತ್ವದ ಉಪಾಸನೆ. ಇವೇ ಆ ಮೂರು ಆಯಾಮಗಳು. ದೇವ ಎಂಬುದು 'ದಿವ್' ಎಂಬ ಧಾತುವಿನಿಂದಾಗಿದೆ. ಈ ಮಾತಿಗೆ 'ಬೆಳಕು' ಎಂದು ಅರ್ಥ. ನಾವು ಬೆಳಕಿನ ಉಪಾಸನೆ ಮಾಡಬೇಕು. ಜೀವನ ಎಂಬುದಕ್ಕೆ ಹರಿಯುತ್ತಿರುವ ಪರಿಶುದ್ಧ ನದಿಯೆಂದು ಅರ್ಥ. ಹೀಗಾಗಿ, ಹರಿಯುವ ನದಿಯಂತೆ ನಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಳ್ಳುತ್ತಿರಬೇಕು. ಅದು ವಿಶ್ವಯಜ್ಞಕ್ಕೆ ದಾರಿಯಾಗುತ್ತದೆ. ನಮಗೆ ಸಮಾನತೆ, ಸಹಕಾರ, ಸಹಯೋಗ, ಸೋದರತ್ವ, ನೈತಿಕತೆ ಮತ್ತು ಕಾರ್ಯಶೀಲತೆಗಳು ಅಗತ್ಯವಷ್ಟೆ. ಆದರೆ, ಇಂದು ಮಾನವ ಜೀವನದಲ್ಲಿ ಕವಿದಿರುವ ಭೀಕರ ನಿರಾಶೆ, ಹತಾಶೆ, ಉದಾಸೀನತೆಗಳಿಂದ ಪಾರಾಗಬೇಕಾದರೆ ಶರೀರಯಜ್ಞ ಮತ್ತು ವಿಶ್ವಯಜ್ಞಗಳ ಅನುಸಂಧಾನಕ್ಕೆ ನಮ್ಮ ಮನಸ್ಸನ್ನು ಸಿದ್ಧಪಡಿಸಿಕೊಳ್ಳಬೇಕು. ಆಗ 'ಜೀವನಯಜ್ಞ'ಕ್ಕೆ ಸಾರ್ಥಕತೆ ಒದಗಿ ಬರುತ್ತದೆ.

■ ಪುರಂಜೀವಿ

## ಮಾತೇ ಮುತ್ತು

- ಪ್ರವಾಹದೊಂದಿಗೆ ಎಲ್ಲಿಂದಲೋ ಹರಿದು ಬಂದ ಎರಡು ಮರದ ತುಂಡುಗಳು ಸ್ವಲ್ಪ ದೂರ ಜೊತೆಯಾಗಿದ್ದು ಮತ್ತೆ ಬೇರೆ ಬೇರೆಯಾಗಿ ಎಲ್ಲಿಗೋ ಹೋಗಿಬಿಡುವಂತೆ ಈ ಸಂಸಾರದ ಹಣೆ ಬರಹ.

  —ತ.ಸು. ಶಾಮರಾಯ

- ಹೂ ಗಿಡದಲ್ಲಿದ್ದಾಗ ಇರುವ ಸೊಬಗು ತಲೆಯಲ್ಲಿ ಕುಳಿತಾಗ ಕಾಣಿಸದು.

  —ಶಿವರಾಮ ಕಾರಂತ

- ಜಗಕ್ಕೆಲ್ಲ ಅರ್ಥವಾಗುವ ಭಾಷೆ ಒಂದಿದೆ; ದುಡ್ಡು!

  —ಎಸ್.ವಿ. ರಂಗಣ್ಣ

- ಸಾಹಿತ್ಯವಿಲ್ಲದೆ ಸಂಗೀತವಿಲ್ಲ, ಸಂಗೀತದ ಸಂವಹನ ಸಾಧ್ಯವಾಗುವುದೇ ಸಾಹಿತ್ಯದಿಂದ.

  —ಎಸ್.ಪಿ. ಬಾಲಸುಬ್ರಹ್ಮಣ್ಯಂ

- ನಡೆಯುವ ಕಾಲು, ನರ್ತಿಸುವ ಕಾಲುಗಳಲ್ಲಿರುವ ಅಂತರವೇ ಪ್ರಕೃತಿ, ಸಂಸ್ಕೃತಿ. ಅದೇ ಕಾಲು ಬರೀ ಬಡೆಯುವಾಗ ಮೂಲ ಪ್ರಕೃತಿ, ಪಳಗಿ ನರ್ತಿಸಿದಾಗ ವ್ಯಕ್ತವಾಗುತ್ತದೆ ಅದು ಪಡೆದ ಸಂಸ್ಕೃತಿ.

  —ದ.ರಾ. ಬೇಂದ್ರೆ

- ಸತ್ತ ನೊಣ ಸುಮ್ಮನಿರದೆ ಉಂಡವನನ್ನು ವಾಂತಿ ಮಾಡಿಸುವ ರೀತಿಯಲ್ಲಿ ದುಷ್ಟನಾದವನು ಸತ್ತ ಮೇಲೂ ಇತರರಿಗೆ ಆಪತ್ತು ಮಾಡದೆ ಇರುವುದಿಲ್ಲ.

  —ಲೀಲಾವತಿ ಪ್ರಬಂಧ

- ಎಲ್ಲ ರೋಗಗಳನ್ನು ನಿವಾರಿಸಬಲ್ಲ ಏಕೈಕ ಔಷಧವೆಂದರೆ ಸಂತಸ.

  —ಜಾನ್ ರಸ್ಕಿನ್

- ಸ್ತ್ರೀಯರ ಸ್ಥಿತಿ ಉತ್ತಮವಾಗುವ ತನಕ ಪ್ರಪಂಚ ಉತ್ತಮವಾಗಲಾರದು.

  —ಸ್ವಾಮಿ ವಿವೇಕಾನಂದ

- ಸುಳ್ಳನಾಡುವ ಕಳ್ಳನೊಡನೆ ಗೆಣೆತನವೇನು?

  —ಪುರಂದರದಾಸ

- ಸ್ವಾತಂತ್ರ್ಯವಿಲ್ಲದ ದೇಶವೊಂದರಲ್ಲಿ ಸೌಂದರ್ಯ ಮತ್ತು ಕಲೆ ಬಾಡಿದ ಹೂವಿನಂತಾಗುತ್ತದೆ.

  —ಜವಾಹರಲಾಲ್ ನೆಹರು

- ಮಾತು ಎಂಬ ಜ್ಯೋತಿ ಸೃಷ್ಟಿಯ ಆರಂಭದಿಂದ ಈ ಹೊತ್ತಿನವರೆಗೆ ಬೆಳಗದೆ ಇದ್ದಿದ್ದರೆ ಈ ಮೂರು ಲೋಕವೂ ಕೂಡ ಕತ್ತಲೆಯಲ್ಲಿ ಮುಳುಗಿ ಹೋಗುತ್ತಿತ್ತು.

  —ಜಿ.ಎಸ್. ಶಿವರುದ್ರಪ್ಪ